**08/1**

# 2005

## ECONOMICS

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Define the following concepts in less than 50 words each. Each question carries 5 marks.*

**1.** (a) Consumer surplus

(b) Oligopoly

(c) Marginal utility of money

(d) Price elasticity of demand

## ಭಾಗ A

*4×5=20*

*ಕೆಳಗಿನ ಪರಿಕಲ್ಪನೆಗಳ ಬಗ್ಗೆ ತಲಾ 50 ಪದಗಳಿಗೆ ಮೀರದಂತೆ ಬರೆಯಿರಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಗ್ರಾಹಕರ ಹೆಚ್ಚುವರಿ

(ಬಿ) ಅಲಿಗೊಪೊಲಿ (ಕೆಲವರ ಸ್ವಾಮ್ಯ)

(ಸಿ) ಹಣದ ಮಾರ್ಜಿನಲ್ ಉಪಯುಕ್ತತೆ

(ಡಿ) ಬೇಡಿಕೆಯ ಬೆಲೆ ಸ್ಥಿತಿಸ್ಥಾಪಕತ್ವ

## PART B

*10×10=100*

*Distinguish the following pairs of concepts in less than 100 words each. Each question carries 10 marks.*

**1.** Marginal rate of substitution and Marginal rate of transformation

**2.** Nominal rate of exchange and Effective rate of exchange

**3.** Current account and Capital account of balance-of-payments

**4.** Free trade and Restricted trade

**5.** Monopoly and monopsony

**6.** Ricardian and Marshallian rent

**7.** Invention and Innovation in the theory of profits

**8.** Nominal wage and Real wage

**9.** Cardinal utility and Ordinal utility

**10.** Complements and Substitutes

## ಭಾಗ B

*10×10=100*

*ಕೆಳಕಂಡ ಪರಿಕಲ್ಪನೆಗಳ ಜೋಡಿಗಳ ವ್ಯತ್ಯಾಸವನ್ನು ತಲಾ 100 ಪದಗಳಿಗೆ ಮೀರದಂತೆ ಬರೆಯಿರಿ. ಪ್ರತಿ ಪ್ರಶ್ನೆಗೆ 10 ಅಂಕಗಳು.*

**1.** ಪ್ರತ್ಯಾಯೋಜನೆಯ ಮಾರ್ಜಿನಲ್ ದರ ಮತ್ತು ಪರಿವರ್ತನೆಯ ಮಾರ್ಜಿನಲ್ ದರ

**2.** ನಾಮೀಯ ವಿನಿಮಯ ದರ ಮತ್ತು ಪರಿಣಾಮೀ ವಿನಿಮಯ ದರ

**3.** ಸಂದಾಯ ಶಿಲ್ಕುಗಳ ಚಾಲ್ತಿ ಖಾತೆ ಮತ್ತು ಬಂಡವಾಳ ಖಾತೆ

**4.** ಮುಕ್ತ ವ್ಯಾಪಾರ ಮತ್ತು ನಿರ್ಬಂಧಿತ ವ್ಯಾಪಾರ

**5.** ಏಕಸ್ವಾಮ್ಯ ಮತ್ತು ಮಾನಾಪ್ಸೊನಿ

**6.** ರಿಕಾರ್ಡಿಯನ್ ಮತ್ತು ಮಾರ್ಷಲಿಯನ್ ಬಾಡಿಗೆ

**7.** ಲಾಭಗಳ ಸಿದ್ಧಾಂತದಲ್ಲಿ ಅನ್ವೇಷಣೆ ಮತ್ತು ಆವಿಷ್ಕಾರ

**8.** ನಾಮೀಯ ಮಜೂರಿ ಮತ್ತು ವಾಸ್ತವ ಮಜೂರಿ

**9.** ಪ್ರಧಾನ ಉಪಯುಕ್ತತೆ ಮತ್ತು ಸಾಮಾನ್ಯ ಉಪಯುಕ್ತತೆ

**10.** ಪೂರಕಗಳು ಮತ್ತು ಬದಲಿಗಳು

[Turn over

## PART C

*6×15=90*

*Answer the following questions in less than 150 words each. Each question carries 15 marks.*

1. Analyse the main objectives and instruments of monetary policy in a developing country.

2. What are the important features of perfect competition ? Explain the price and output determination of a firm in short and long run under perfect competition.

3. Explain the basic concepts and methods of estimation of national income in an open economy.

4. Explain the equilibrium of a consumer by using the indifference curve analysis. Using diagrams, show the income effect for this consumer when (a) both the goods consumed are normal goods, and (b) one of the goods consumed is an inferior good.

5. Given that output is at equilibrium level, analyse the macroeconomic relationship between aggregate demand, consumption, savings and investment in a closed economy without the government sector.

6. Explain the functions of money and types of money supply. Analyse the relationship between transactions and money in terms of the quantity theory of money.

## ಭಾಗ C

*6×15=90*

*ಕೆಳಗಿನ ಪ್ರಶ್ನೆಗಳಿಗೆ ತಲಾ 150 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 15 ಅಂಕಗಳು.*

**1.** ಅಭಿವೃದ್ಧಿಶೀಲ ದೇಶವೊಂದರಲ್ಲಿ ಹಣಕಾಸು ನೀತಿಯ ಪ್ರಧಾನ ಧ್ಯೇಯಗಳು ಮತ್ತು ಸಾಧನಗಳು ಯಾವುವು ? ವಿಶ್ಲೇಷಿಸಿ.

**2.** ಪರಿಪೂರ್ಣ ಸ್ಪರ್ಧೆಯ ಮುಖ್ಯ ಲಕ್ಷಣಗಳೇನು ? ಪರಿಪೂರ್ಣ ಸ್ಪರ್ಧೆಯ ಸಂದರ್ಭದಲ್ಲಿ, ಉದ್ಯಮವೊಂದರ ಬೆಲೆ ಮತ್ತು ಉತ್ಪತ್ತಿಯ ಅಲ್ಪಕಾಲೀನ ಹಾಗೂ ದೀರ್ಘಕಾಲೀನ ನಿರ್ಣಯ ಯಾವ ರೀತಿ ಇರುತ್ತದೆ ? ವಿವರಿಸಿ.

**3.** ಒಂದು ಮುಕ್ತ ಅರ್ಥವ್ಯವಸ್ಥೆಯಲ್ಲಿ, ರಾಷ್ಟ್ರೀಯ ವರಮಾನದ ಅಂದಾಜಿನ ಮೂಲ ಪರಿಕಲ್ಪನೆಗಳು ಹಾಗೂ ವಿಧಾನಗಳನ್ನು ವಿವರಿಸಿ.

**4.** ತಟಸ್ಥ ರೇಖಾವಕ್ರ ವಿಶ್ಲೇಷಣೆಯನ್ನು ಬಳಸಿಕೊಂಡು ಗ್ರಾಹಕನ ಸಮತೂಕತೆಯನ್ನು ವಿವರಿಸಿ.
(a) ಈ ಗ್ರಾಹಕನು ಬಳಸಿದ ಎರಡೂ ಸರಕುಗಳು ಮಾಮೂಲು ಸರಕುಗಳಾಗಿದ್ದಾಗ ಮತ್ತು
(b) ಬಳಸಿದ ಒಂದು ಸರಕು ಕಳಪೆಯದಾಗಿದ್ದಾಗ ಈತನ ಮೇಲೆ ವರಮಾನದ ಪರಿಣಾಮ ಯಾವ ರೀತಿ ಇರುತ್ತದೆ ಎಂಬುದನ್ನು ರೇಖಾಕೃತಿಗಳ ಮೂಲಕ ವಿವರಿಸಿ.

**5.** ಉತ್ಪತ್ತಿಯು ಸಮತೂಕ ಮಟ್ಟದಲ್ಲಿದೆ ಎಂದಿಟ್ಟುಕೊಂಡಾಗ, ಸರ್ಕಾರೀ ವಲಯವಿಲ್ಲದ ಒಂದು ಮುಕ್ತ ಅರ್ಥವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆ, ಬಳಕೆ, ಉಳಿತಾಯ ಮತ್ತು ಹೂಡಿಕೆಗಳ ನಡುವಿನ ಸಮಷ್ಟಿ ಅರ್ಥವ್ಯವಸ್ಥಾ ಸಂಬಂಧ ಹೇಗಿರುತ್ತದೆ ? ವಿಶ್ಲೇಷಿಸಿ.

**6.** ಹಣದ ಕಾರ್ಯಗಳು ಮತ್ತು ಹಣ ಒದಗಣೆಯ ವಿವಿಧ ಪ್ರಕಾರಗಳನ್ನು ವಿವರಿಸಿ. ಹಣದ ಪರಿಮಾಣ ಸಿದ್ಧಾಂತದ ದೃಷ್ಟಿಯಿಂದ ವ್ಯವಹಾರಗಳು ಮತ್ತು ಹಣದ ನಡುವಿನ ಸಂಬಂಧವನ್ನು ವಿಶ್ಲೇಷಿಸಿ.

## PART D

3×30=90

*Answer any* ***three*** *of the following questions, in less than 300 words each. Each question carries 30 marks.*

1. What does 'Fiscal Policy' mean ? Distinguish different types of government budget deficits. Explain the fiscal instruments for reduction in these deficits without compromising on macro-economic objectives.

2. What does 'Economic Growth' or 'Development' mean ? Explain the determinants of economic growth in the Harrod-Domar model. Comment on the usefulness of this model for economic planning in developing countries.

3. In what ways have the establishment and working of the International Monetary Fund and the World Bank been helpful to the developing countries ? Do you think that the continuation of these institutions has any justification under globalisation of capital ?

4. What do you mean by 'Adverse Balance of Payments' ? Explain the measures to achieve favourable balance of payments in a developing country.

5. Consider the following hypothetical data on production, price and cost of a firm :

| Total production (units) | Price per unit Rs. | Total cost Rs. |
|---|---|---|
| 0 | 60 | 128 |
| 1 | 60 | 184 |
| 2 | 60 | 218 |
| 3 | 60 | 236 |
| 4 | 60 | 244 |
| 5 | 60 | 248 |
| 6 | 60 | 254 |
| 7 | 60 | 268 |
| 8 | 60 | 296 |
| 9 | 60 | 344 |

08/1

## ಭಾಗ D

*ಕೆಳಗಿನ ಯಾವುದಾದರೂ* **ಮೂರು** *ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.* *3×30=90*

**1.** 'ವಿತ್ತ ನೀತಿ' ಎಂದರೇನು ? ಸರ್ಕಾರದ ಬಜೆಟ್ ಕೊರತೆಯ ವಿವಿಧ ಪ್ರಕಾರಗಳು ಯಾವುವು ? ಸ್ಪಷ್ಟಪಡಿಸಿ. ಸಮಷ್ಟಿ ಆರ್ಥಿಕ ಧ್ಯೇಯಗಳೊಂದಿಗೆ ರಾಜಿ ಮಾಡಿಕೊಳ್ಳದೆ, ಈ ಕೊರತೆಗಳನ್ನು ತಗ್ಗಿಸುವ ವಿತ್ತ ಕ್ರಮಗಳನ್ನು ವಿವರಿಸಿ.

**2.** 'ಆರ್ಥಿಕ ಬೆಳವಣಿಗೆ' ಅಥವಾ 'ಅಭಿವೃದ್ಧಿ' ಎಂದರೇನು ? ಹೆರಾಡ್-ಡೊಮಾರ್ ಆಕೃತಿ ಮಾದರಿಯಲ್ಲಿರುವ ಆರ್ಥಿಕ ಬೆಳವಣಿಗೆಯ ನಿರ್ಧಾರಕಗಳನ್ನು ವಿವರಿಸಿ. ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಯೋಜನೆಗಳನ್ನು ರೂಪಿಸುವಲ್ಲಿ ಈ ಆಕೃತಿ ಮಾದರಿ ಹೇಗೆ ಉಪಯುಕ್ತ ಎಂಬುದನ್ನು ವಿವರಿಸಿ.

**3.** ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕಿನ ಸ್ಥಾಪನೆ ಹಾಗೂ ಕಾರ್ಯಾಚರಣೆಗಳು ಯಾವ ರೀತಿ ಅಭಿವೃದ್ಧಿಶೀಲ ದೇಶಗಳಿಗೆ ಸಹಾಯಕವಾಗಿವೆ ? ಬಂಡವಾಳದ ಜಗತೀಕರಣ ನಡೆಯುತ್ತಿರುವ ಇಂದಿನ ಸಂದರ್ಭದಲ್ಲಿ, ಈ ಸಂಸ್ಥೆಗಳನ್ನು ಮುಂದುವರಿಸಿಕೊಂಡು ಬರುವುದಕ್ಕೆ ಏನಾದರೂ ಸಮರ್ಥನೆ ಇದೆಯೆ ? ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**4.** ಸಂದಾಯಗಳ ಪ್ರತಿಕೂಲ ಬಾಕಿ (Adverse balance of payments) ಎಂದರೇನು ? ಅಭಿವೃದ್ಧಿಶೀಲ ದೇಶವೊಂದರಲ್ಲಿ ಸಂದಾಯಗಳ ಅನುಕೂಲತರ ಬಾಕಿಯನ್ನು ಸಾಧಿಸುವುದಕ್ಕೆ ಕೈಗೊಳ್ಳಬಹುದಾದ ಕ್ರಮಗಳನ್ನು ವಿವರಿಸಿ.

**5.** ಒಂದು ಉದ್ಯಮದ ಉತ್ಪಾದನೆ, ಬೆಲೆ ಮತ್ತು ವೆಚ್ಚಕ್ಕೆ ಸಂಬಂಧಿಸಿದ ಊಹಾತ್ಮಕ ದತ್ತಾಂಶ ಈ ರೀತಿ ಇದೆ :

| ಒಟ್ಟು ಉತ್ಪಾದನೆ | ಪ್ರತಿ ಏಕಮಾನದ ಬೆಲೆ | ಒಟ್ಟು ವೆಚ್ಚ |
|---|---|---|
| 0 | 60 | 128 |
| 1 | 60 | 184 |
| 2 | 60 | 218 |
| 3 | 60 | 236 |
| 4 | 60 | 244 |
| 5 | 60 | 248 |
| 6 | 60 | 254 |
| 7 | 60 | 268 |
| 8 | 60 | 296 |
| 9 | 60 | 344 |
| 10 | 60 | 418 |

Using the above data, answer the following :

Find out (a) Marginal cost, (b) Average cost, (c) Average variable cost, (d) Average revenue, (e) Total revenue, and (f) Marginal revenue, for each level of production.

Find the total profit, when marginal cost is equal to marginal revenue.

08/1

ಮೇಲಿನ ದತ್ತಾಂಶವನ್ನು ಬಳಸಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ :

ಉತ್ಪಾದನೆಯ ಪ್ರತಿಯೊಂದು ಹಂತಕ್ಕೆ (a) ಮಾರ್ಜಿನಲ್ ವೆಚ್ಚ, (b) ಸರಾಸರಿ ವೆಚ್ಚ, (c) ಸರಾಸರಿ ವ್ಯತ್ಯಾಸಿ ವೆಚ್ಚ, (d) ಸರಾಸರಿ ರೆವಿನ್ಯೂ, (e) ಒಟ್ಟು ರೆವಿನ್ಯೂ ಮತ್ತು (f) ಮಾರ್ಜಿನಲ್ ರೆವಿನ್ಯೂ ಕಂಡುಹಿಡಿಯಿರಿ.

ಮಾರ್ಜಿನಲ್ ವೆಚ್ಚವು ಮಾರ್ಜಿನಲ್ ರೆವಿನ್ಯೂಗೆ ಸಮವಾಗಿದ್ದಾಗ ಒಟ್ಟು ಲಾಭ ಎಷ್ಟು ? ಕಂಡುಹಿಡಿಯಿರಿ.

08/2

# 2005

## ECONOMICS

### Paper 2

*Time : 3 Hours ]* *[ Maximum Marks : 300*

---

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=2(

*Define the following concepts in less than 50 words each. Each question carries 5 marks.*

1. (a) Poverty line in India

   (b) Consumer price index for industrial workers in Karnataka State

   (c) Intellectual property rights

   (d) Service taxation in India

## ಭಾಗ A

*4×5=20*

*ಕೆಳಗಿನ ಪರಿಕಲ್ಪನೆಗಳ ಬಗ್ಗೆ ತಲಾ 50 ಪದಗಳಿಗೆ ಮೀರದಂತೆ ಬರೆಯಿರಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಭಾರತದಲ್ಲಿ ಬಡತನದ ರೇಖೆ

(ಬಿ) ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಕಾರ್ಮಿಕರಿಗೆ ಗ್ರಾಹಕಬೆಲೆ ಸೂಚಿ

(ಸಿ) ಬೌದ್ಧಿಕ ಆಸ್ತಿ ಹಕ್ಕುಗಳು

(ಡಿ) ಭಾರತದಲ್ಲಿ ಸೇವಾ ತೆರಿಗೆ ವ್ಯವಸ್ಥೆ

[Turn over

## PART B

*10×10=100*

*Answer the following questions in less than 100 words each. Each question carries 15 marks.*

1. Distinguish the essential characteristics of Indian economy as a federal, mixed and open economy.

2. Explain the construction of Wholesale Price Index in India. In what ways is this Index used as a measure of price inflation in the country ?

3. Explain the current composition and definition of the modern small-scale enterprises in India.

4. What are the objectives of India's Tenth Five Year Plan ? Do you think that these objectives are similar to the objectives of India's Ninth Five Year Plan ? Substantiate your answer.

5. Distinguish the current functions of India's Planning Commission and Karnataka's State Planning Board.

6. Explain the major objectives and strategies of Karnataka's New Industrial Policy 2001 – 2006.

7. Distinguish the fiscal deficit, primary deficit and revenue deficit of the Government of India.

8. Explain the major objectives for promoting foreign direct investment in India. Distinguish the major components of India's foreign investment inflows since 1991.

9. Analyse the objectives and instruments of the price stabilization policy of agricultural commodities in India.

10. Explain the current objectives and instruments of fiscal transfers from the Union Government to State governments in India.

## ಭಾಗ B

*10×10=100*

*ಕೆಳಗಿನ ಪ್ರಶ್ನೆಗಳಿಗೆ ತಲಾ 100 ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. ಪ್ರತಿ ಪ್ರಶ್ನೆಗೆ 10 ಅಂಕಗಳು.*

**1.** ಒಂದು ಸಂಯುಕ್ತ, ಮಿಶ್ರ ಹಾಗೂ ಮುಕ್ತ ಅರ್ಥವ್ಯವಸ್ಥೆಯಾಗಿ ಭಾರತದ ಅರ್ಥವ್ಯವಸ್ಥೆಯ ಅವಶ್ಯ ಗುಣಲಕ್ಷಣಗಳು ಯಾವುವು ? ಸ್ಪಷ್ಟಪಡಿಸಿ.

**2.** ಭಾರತದಲ್ಲಿ ಸಗಟು ಬೆಲೆ ಸೂಚಿಯು ಹೇಗೆ ರೂಪಿಸಲಾಗುತ್ತದೆ ? ವಿವರಿಸಿ. ದೇಶದ ಹಣದುಬ್ಬರದ ಮಾಪಕವಾಗಿ ಈ ಸೂಚಿಯನ್ನು ಹೇಗೆ ಬಳಸಲಾಗುತ್ತದೆ ?

**3.** ಭಾರತದ ಆಧುನಿಕ ಸಣ್ಣ ಪ್ರಮಾಣದ ಉದ್ಯಮಗಳ ಪ್ರಸ್ತುತ ಸಂಯೋಜನೆ ಯಾವ ರೀತಿ ಇದೆ ಮತ್ತು ಈ ಉದ್ಯಮಗಳನ್ನು ಹೇಗೆ ಪರಿಭಾಷಿಸಲಾಗಿದೆ ?

**4.** ಭಾರತದ ಹತ್ತನೇ ಪಂಚವಾರ್ಷಿಕ ಯೋಜನೆಯ ಧ್ಯೇಯಗಳೇನು ? ಈ ಧ್ಯೇಯಗಳಿಗೂ 9ನೇ ಪಂಚವಾರ್ಷಿಕ ಯೋಜನೆಯ ಧ್ಯೇಯಗಳಿಗೂ ಸಾಮ್ಯತೆ ಇದೆಯೆ ? ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**5.** ಭಾರತದ ಯೋಜನಾ ಆಯೋಗ ಮತ್ತು ಕರ್ನಾಟಕದ ರಾಜ್ಯ ಯೋಜನಾ ಮಂಡಳಿಗಳು ಸಧ್ಯದಲ್ಲಿ ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ವಿವರಿಸಿ.

**6.** ಕರ್ನಾಟಕ ಹೊಸ ಕೈಗಾರಿಕಾ ನೀತಿ 2001 – 2006, ಇದರ ಪ್ರಮುಖ ಧ್ಯೇಯಗಳು ಹಾಗೂ ಕಾರ್ಯತಂತ್ರಗಳನ್ನು ಕುರಿತು ಬರೆಯಿರಿ.

**7.** ಭಾರತ ಸರ್ಕಾರದ ವಿತ್ತೀಯ ಕೊರತೆ, ಪ್ರಾಥಮಿಕ ಕೊರತೆ ಹಾಗೂ ರೆವಿನ್ಯೂ ಕೊರತೆಗಳನ್ನು ಸ್ಪಷ್ಟಪಡಿಸಿ.

**8.** ಭಾರತದಲ್ಲಿ ವಿದೇಶೀ ನೇರಹೂಡಿಕೆಯನ್ನು ಪ್ರವರ್ಧಿಸುವುದರ ಪ್ರಮುಖ ಉದ್ದೇಶಗಳೇನು ? ವಿವರಿಸಿ. 1991 ರಿಂದ ಭಾರತಕ್ಕೆ ಹರಿದುಬರುತ್ತಿರುವ ವಿದೇಶಿ ಹೂಡಿಕೆಗಳು ಮುಖ್ಯವಾಗಿ ಯಾವ ಬಾಬ್ತುಗಳಿಗೆ ಸಂಬಂಧಿಸಿವೆ ?

**9.** ಭಾರತದಲ್ಲಿ ಕೃಷಿ ಪದಾರ್ಥಗಳ ಬೆಲೆ ಸ್ಥಿರತಾ ನೀತಿಯ ಗುರಿಗಳೇನು ಮತ್ತು ಕ್ರಮಗಳೇನು ? ವಿಶ್ಲೇಷಿಸಿ.

**10.** ಭಾರತದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಗಳಿಗೆ ವಿತ್ತೀಯ ವರ್ಗಾವಣೆಗಳನ್ನು ಮಾಡುವುದರ ಸಧ್ಯದ ಗುರಿಗಳು ಮತ್ತು ಕ್ರಮಗಳು ಯಾವುವು ? ವಿವರಿಸಿ.

[Turn over

## PART C

*6×15=90*

*Answer the following questions in less than 150 words each. Each question carries 15 marks.*

**1.** Consider the following economic data on India's Gross Domestic Product (GDP) at factor cost and constant (1993 – 94) prices

| Sectors | 1991 – 92 | 1995 – 96 | 1999 – 00 | 2003 – 04 |
|---|---|---|---|---|
| 1. Primary sector (Rs. in crore) | 239253 | 275153 | 314525 | 343806 |
| 2. Secondary sector Rs. in crore) | 167967 | 229098 | 279066 | 351046 |
| 3. Tertiary sector (Rs. in crore) | 294643 | 395312 | 554776 | 735696 |
| 4. Total GDP (Rs. in crore) | 701863 | 899563 | 1148367 | 1430548 |
| 5. Total population (in million persons) | 856 | 928 | 1001 | 1073 |

Using the above data, answer the following :

(a) What is the measure of national income used in the table ?

(b) Analyse the growth of total national income and per capita national income.

(c) Analyse the changes in the sectoral share in national income.

(d) Analyse the growth of sectoral components of national income.

**2.** Critically examine the measures for promotion and development of small-scale industries by the Government of India since 1991.

**3.** What are the objectives of fiscal reforms in Karnataka ? Do you think that the strategies of fiscal reforms are consistent with the objectives of economic growth in the State ? Substantiate your answer.

**4.** Describe the major reforms in India's commercial banking sector. Do you think that the effects of these reforms have been positive on lending to the priority sectors by commercial banks ? Substantiate your answer.

## ಭಾಗ C

*6×15=90*

*ಕೆಳಗಿನ ಪ್ರಶ್ನೆಗಳಿಗೆ ತಲಾ 150 ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. ಪ್ರತಿ ಪ್ರಶ್ನೆಗೆ 15 ಅಂಕಗಳು.*

**1.** ಫ್ಯಾಕ್ಟರ್ ವೆಚ್ಚ (Factor Cost) ಮತ್ತು ಸ್ಥಿರ (1993 – 94) ವೆಚ್ಚಗಳಲ್ಲಿ, ಭಾರತದ ಸ್ಥೂಲ ಗೃಹ ಉತ್ಪನ್ನ (GDP) ಕ್ಕೆ ಸಂಬಂಧಿಸಿದಂತೆ ಕೆಳಕಂಡ ಆರ್ಥಿಕ ದತ್ತಾಂಶವನ್ನು ಪರಿಶೀಲಿಸಿ :

| ವಲಯಗಳು | 1991 – 92 | 1995 – 96 | 1999 – 00 | 2003 – 04 |
|---|---|---|---|---|
| 1. ಪ್ರಾಥಮಿಕ ವಲಯ (ಕೋಟಿ ರೂ.ಗಳಲ್ಲಿ) | 239253 | 275153 | 314525 | 343806 |
| 2. ದ್ವಿತೀಯ ವಲಯ (ಕೋಟಿ ರೂ.ಗಳಲ್ಲಿ) | 167967 | 229098 | 279066 | 351046 |
| 3. ತೃತೀಯ ವಲಯ (ಕೋಟಿ ರೂ.ಗಳಲ್ಲಿ) | 294643 | 395312 | 554776 | 735696 |
| 4. ಒಟ್ಟು ಜಿ.ಡಿ.ಪಿ. (ಕೋಟಿ ರೂ.ಗಳಲ್ಲಿ) | 701863 | 899563 | 1148367 | 1430548 |
| 5. ಒಟ್ಟು ಜನಸಂಖ್ಯೆ (ಮಿಲಿಯನ್ ವ್ಯಕ್ತಿಗಳಲ್ಲಿ) | 856 | 928 | 1001 | 1073 |

ಮೇಲಿನ ದತ್ತಾಂಶವನ್ನು ಬಳಸಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

(a) ಈ ಕೋಷ್ಟಕದಲ್ಲಿ ಬಳಸಲಾಗಿರುವ ರಾಷ್ಟ್ರೀಯ ಆದಾಯದ ಮಾಪಕ ಯಾವುದು ?

(b) ಒಟ್ಟು ರಾಷ್ಟ್ರೀಯ ಆದಾಯ ಮತ್ತು ತಲಾ ರಾಷ್ಟ್ರೀಯ ಆದಾಯದ ಬೆಳವಣಿಗೆಯನ್ನು ವಿಶ್ಲೇಷಿಸಿ.

(c) ರಾಷ್ಟ್ರೀಯ ಆದಾಯದಲ್ಲಿ ಆಯಾ ವಲಯಗಳ ಪಾಲಿನಲ್ಲಿ ಆಗಿರುವ ಬದಲಾವಣೆಗಳನ್ನು ವಿಶ್ಲೇಷಿಸಿ.

(d) ರಾಷ್ಟ್ರೀಯ ಆದಾಯದ ವಲಯ ಘಟಕಗಳಲ್ಲಿ ಆಗಿರುವ ಬೆಳವಣಿಗೆಯನ್ನು ವಿಶ್ಲೇಷಿಸಿ.

**2.** ಭಾರತ ಸರ್ಕಾರವು 1991 ರಿಂದಲೂ ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರವರ್ಧನೆ ಹಾಗೂ ಅಭಿವೃದ್ಧಿಗಾಗಿ ಏನು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

**3.** ಕರ್ನಾಟಕದಲ್ಲಿ, ವಿತ್ತೀಯ ಸುಧಾರಣೆಗಳ ಗುರಿಗಳು ಯಾವುವು ? ವಿತ್ತೀಯ ಸುಧಾರಣೆಗಳ ತಂತ್ರಗಳು ರಾಜ್ಯದ ಆರ್ಥಿಕ ಬೆಳವಣಿಗೆಯ ಗುರಿಗಳಿಗೆ ಅನುಗುಣವಾಗಿವೆ ಎಂದು ಭಾವಿಸುತ್ತೀರ ? ನಿಮ್ಮ ಉತ್ತರವನ್ನು ಸ್ಪಷ್ಟಪಡಿಸಿ.

**4.** ಭಾರತದ ವಾಣಿಜ್ಯ ಬ್ಯಾಂಕಿಂಗ್ ವಲಯದಲ್ಲಿ ನಡೆದಿರುವ ಪ್ರಮುಖ ಸುಧಾರಣೆಗಳನ್ನು ವಿವರಿಸಿ. ವಾಣಿಜ್ಯ ಬ್ಯಾಂಕುಗಳು ಆದ್ಯತಾ ಕ್ಷೇತ್ರಗಳಿಗೆ ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ, ಈ ಸುಧಾರಣೆಗಳಿಂದ ಒಳ್ಳೆಯ ಪರಿಣಾಮವಾಗಿದೆಯೆ ? ವಿಶ್ಲೇಷಿಸಿ.

**5.** Consider the following economic data on current account transactions in India's balance of payments at current prices :

| Trade in goods and services | 1990 – 91 | 1997 – 98 | 2001 – 02 | 2003 – 04 |
|---|---|---|---|---|
| 1. Trade in goods (Rs. in crore) | | | | |
| Imports | 50086 | 190508 | 264589 | 368102 |
| Exports | 33153 | 132703 | 207852 | 296767 |
| 2. Trade in services (Rs. in crore) | | | | |
| Receipts | 13396 | 86245 | 147778 | 243103 |
| Payments | 13829 | 49323 | 102639 | 123816 |

Using the above data, analyse the performance of India's foreign trade in terms of

(a) growth of exports and imports,

(b) nature and growth of balance of trade, and

(c) nature and growth of current account balance.

**6.** What does Value Added Taxation (VAT) mean ? Compare the working and implications of a VAT and a sales tax with a numerical example.

**5.** ಚಾಲ್ತಿ ಬೆಲೆಗಳಲ್ಲಿ, ಭಾರತದ ಸಂದಾಯಗಳ ಬಾಕಿಯ ಚಾಲ್ತಿ ವ್ಯವಹಾರಗಳ ಖಾತೆಗೆ ಸಂಬಂಧಿಸಿದಂತೆ ಕೆಳಕಂಡ ಆರ್ಥಿಕ ದತ್ತಾಂಶವನ್ನು ಪರಿಶೀಲಿಸಿ :

| ಸರಕು ಮತ್ತು ಸೇವೆಗಳ ಮಾರಾಟ | 1990 – 91 | 1997 – 98 | 2001 – 02 | 2003 – 04 |
|---|---|---|---|---|
| 1. ಸರಕುಗಳ ಮಾರಾಟ (ಕೋಟಿ ರೂ.ಗಳಲ್ಲಿ) | | | | |
| ಆಮದುಗಳು | 50086 | 190508 | 264589 | 368102 |
| ರಫ್ತುಗಳು | 33153 | 132703 | 207852 | 296767 |
| 2. ಸೇವೆಗಳ ಮಾರಾಟ (ಕೋಟಿ ರೂ.ಗಳಲ್ಲಿ) | | | | |
| ಸ್ವೀಕೃತಿಗಳು | 13396 | 86245 | 147778 | 243103 |
| ಸಂದಾಯಗಳು | 13829 | 49323 | 102639 | 123816 |

ಮೇಲಿನ ದತ್ತಾಂಶವನ್ನು ಬಳಸಿಕೊಂಡು, ಭಾರತದ ವಿದೇಶೀ ವ್ಯಾಪಾರ ನಿರ್ವಹಣೆಯನ್ನು

(a) ರಫ್ತು ಮತ್ತು ಆಮದುಗಳ ಬೆಳವಣಿಗೆ

(b) ವ್ಯಾಪಾರ ಬಾಕಿಯ ಸ್ವರೂಪ ಮತ್ತು ಬೆಳವಣಿಗೆ ಹಾಗೂ

(c) ಚಾಲ್ತಿ ಖಾತೆಯ ಶಿಲ್ಕಿನ ಸ್ವರೂಪ ಮತ್ತು ಬೆಳವಣಿಗೆ ದೃಷ್ಟಿಯಿಂದ ವಿಶ್ಲೇಷಿಸಿ.

**6.** 'ಮೌಲ್ಯವರ್ಧಿತ ತೆರಿಗೆ ಪದ್ಧತಿ (VAT)' ಎಂದರೇನು ? ಒಂದು ಸಂಖ್ಯಾತ್ಮಕ ಉದಾಹರಣೆಯೊಂದಿಗೆ VAT ಮತ್ತು ಮಾರಾಟ ತೆರಿಗೆ ಪದ್ಧತಿಗಳ ಕಾರ್ಯ ನಿರ್ವಹಣೆ ಮತ್ತು ಪರಿಣಾಮಗಳನ್ನು ಹೋಲಿಸಿ ಬರೆಯಿರಿ.

## PART D

*3×30=90*

*Answer any* ***three*** *of the following questions, in less than 300 words each. Each question carries 30 marks.*

**1.** Consider the following economic data :
Karnataka's Gross State Domestic Product (GSDP) at factor cost and constant (1993-94) prices

| Sectors | 1995 – 96 | 1990 – 00 | 2003 – 04 |
|---|---|---|---|
| 1. Primary sector (Rs. in crore) | 15208 | 18868 | 16114 |
| 2. Secondary sector (Rs. in crore) | 12107 | 17080 | 22910 |
| 3. Tertiary sector (Rs. in crore) | 18852 | 27903 | 41525 |
| 4. Total GSDP (Rs. in crore) | 46167 | 63851 | 80549 |
| 5. Total population (in million persons) | 49 | 52 | 55 |

Using the above data, answer the following :

(a) Analyse the growth of total State income and per capita State income.

(b) Analyse the changes in the sectoral share in the State income.

(c) Analyse the growth of the sectoral components of the State income.

(d) Compare the performance of Karnataka's growth and composition of State with the national level, using the data in question 1 of Part C.

**2.** Analyse the policy measures and programmes for alleviation of poverty in rural and urban India and Karnataka state since 1991.

**3.** Analyse the major policy objectives and instruments for the development of the agricultural sector in India's Tenth Five Year. Highlight the special policies and programmes for increasing the productivity of the agricultural sector during this plan period with special reference to Karnataka State.

**4.** What does 'Food Security' mean ? Explain the working of the Public Distribution System for food grains in India. Do you think that the Public Distribution System for food grains is an effective instrument of food security in India ?

## ಭಾಗ D

*3×30=90*

*ಕೆಳಗಿನ ಯಾವುವಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಕೆಳಗಿನ ಪ್ರಶ್ನೆಗಳಿಗೆ ತಲಾ 300 ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. ಪ್ರತಿ ಪ್ರಶ್ನೆಗೂ 30 ಅಂಕಗಳು.*

**1.** ಚಾಲ್ತಿ ವೆಚ್ಚ ಮತ್ತು ಸ್ಥಿರ (1993 – 94) ವೆಚ್ಚಗಳಲ್ಲಿ ಕರ್ನಾಟಕದ ಸ್ಥೂಲ ರಾಜ್ಯ ಗೃಹ ಉತ್ಪನ್ನ (GSDP) ಕ್ಕೆ ಸಂಬಂಧಿಸಿದ ಕೆಳಕಂಡ ಆರ್ಥಿಕ ದತ್ತಾಂಶವನ್ನು ಪರಿಶೀಲಿಸಿ :

| ವಲಯಗಳು | 1995 – 96 | 1990 – 00 | 2003 – 04 |
|---|---|---|---|
| 1. ಪ್ರಾಥಮಿಕ ವಲಯ (ಕೋಟಿ ರೂ.ಗಳಲ್ಲಿ) | 15208 | 18868 | 16114 |
| 2. ದ್ವಿತೀಯ ವಲಯ (ಕೋಟಿ ರೂ.ಗಳಲ್ಲಿ) | 12107 | 17080 | 22910 |
| 3. ತೃತೀಯ ವಲಯ (ಕೋಟಿ ರೂ.ಗಳಲ್ಲಿ) | 18852 | 27903 | 41525 |
| 4. ಒಟ್ಟು ಜಿ.ಎಸ್.ಡಿ.ಪಿ. (ಕೋಟಿ ರೂ.ಗಳಲ್ಲಿ) | 46167 | 63851 | 80549 |
| 5. ಒಟ್ಟು ಜನಸಂಖ್ಯೆ (ಮಿಲಿಯನ್ ಗಳಲ್ಲಿ) | 49 | 52 | 55 |

ಮೇಲಿನ ದತ್ತಾಂಶವನ್ನು ಬಳಸಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

(a) ರಾಜ್ಯದ ಒಟ್ಟು ಆದಾಯ ಮತ್ತು ತಲಾ ರಾಜ್ಯ ಆದಾಯ ಬೆಳವಣಿಗೆಯನ್ನು ವಿಶ್ಲೇಷಿಸಿ.

(b) ರಾಜ್ಯದ ಆದಾಯದಲ್ಲಿ ಆಯಾ ವಲಯಗಳ ಪಾಲಿನಲ್ಲಿ ಆಗಿರುವ ಬದಲಾವಣೆಗಳನ್ನು ವಿಶ್ಲೇಷಿಸಿ.

(c) ರಾಜ್ಯ ಆದಾಯದ ವಲಯ ಘಟಕಗಳಲ್ಲಿ ಆಗಿರುವ ಬೆಳವಣಿಗೆಯನ್ನು ವಿಶ್ಲೇಷಿಸಿ.

(d) ಭಾಗ C ಯಲ್ಲಿಯ 1 ನೇ ಪ್ರಶ್ನೆಯಲ್ಲಿ ಕೊಟ್ಟಿರುವ ದತ್ತಾಂಶವನ್ನು ಬಳಸಿಕೊಂಡು, ಕರ್ನಾಟಕದ ಬೆಳವಣಿಗೆಯ ನಿರ್ವಹಣೆ ಮತ್ತು ರಾಜ್ಯದ ಸಂಯೋಜನೆಯನ್ನು ರಾಷ್ಟ್ರೀಯ ಮಟ್ಟದೊಂದಿಗೆ ಹೋಲಿಸಿ.

**2.** ಭಾರತದ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬಡತನವನ್ನು ತಗ್ಗಿಸುವುದಕ್ಕಾಗಿ 1991 ರಿಂದ ಕೈಗೊಂಡಿರುವ ನೀತಿ ಧೋರಣೆಯ ಕ್ರಮಗಳು ಹಾಗೂ ಕಾರ್ಯಕ್ರಮಗಳನ್ನು ವಿಶ್ಲೇಷಿಸಿ.

**3.** ಭಾರತದ 10ನೇ ಪಂಚವಾರ್ಷಿಕ ಯೋಜನೆಯಲ್ಲಿ, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಇರುವ ಪ್ರಮುಖ ನೀತಿ ಧೋರಣಾ ಉದ್ದೇಶಗಳು ಹಾಗೂ ಕ್ರಮಗಳನ್ನು ವಿಶ್ಲೇಷಿಸಿ. ಈ ಯೋಜನಾ ಅವಧಿಯಲ್ಲಿ ಕೃಷಿ ವಲಯದ ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಹಾಕಿಕೊಂಡಿರುವ ವಿಶೇಷ ಧೋರಣೆಗಳು ಮತ್ತು ಕಾರ್ಯಕ್ರಮಗಳನ್ನು, ಕರ್ನಾಟಕ ರಾಜ್ಯವನ್ನು ವಿಶೇಷ ಗಮನದಲ್ಲಿಟ್ಟು ಕೊಂಡು ನಿರೂಪಿಸಿ.

[Turn over

**5.** Consider the following economic data on India's Gross Domestic Savings and Capital Formation at market prices :

| Savings and Capital Formation | 1991 – 92 | 1995 – 96 | 1999 – 00 | 2003 – 04 |
|---|---|---|---|---|
| 1. Gross Domestic Savings | | | | |
| Household sector | 110736 | 216140 | 404401 | 671692 |
| Private corporate sector | 20304 | 58542 | 84329 | 114157 |
| Public sector | 12868 | 24065 | – 20049 | – 9429 |
| 2. Gross Domestic Capital Formation | | | | |
| Public sector | 57633 | 90977 | 134484 | 154086 |
| Private sector | 85627 | 224202 | 323778 | 481608 |
| 3. Total GDP (Rs. in crore) | 653117 | 1188012 | 1936831 | 2760025 |

Using the above data, answer the following :

(a) Analyse the growth of gross domestic savings by its sources.

(b) Analyse the growth of gross capital formation by the public and private sectors

(c) Analyse the levels and growth of Savings ratio and Investment ratio.

(d) Analyse the relationship between the growth of national income, savings and capital formation.

**4.** 'ಆಹಾರ ಭದ್ರತೆ' ಎಂದರೇನು ? ಭಾರತದಲ್ಲಿ ಆಹಾರ ಧಾನ್ಯಗಳ ಸಾರ್ವಜನಿಕ ವಿತರಣಾ ವ್ಯವಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ ವಿವರಿಸಿ. ಭಾರತದಲ್ಲಿ ಆಹಾರ ಭದ್ರತೆಗೆ ಆಹಾರಧಾನ್ಯಗಳ ಸಾರ್ವಜನಿಕ ವಿತರಣಾ ವ್ಯವಸ್ಥೆ ಒಂದು ಪರಿಣಾಮಕಾರಿ ಕ್ರಮ ಎಂದು ನೀವು ಭಾವಿಸುತ್ತೀರ ?

**5.** ಮಾರುಕಟ್ಟೆ ಬೆಲೆಗಳಲ್ಲಿ, ಭಾರತದ ಸ್ಥೂಲ ಗೃಹ ಉಳಿತಾಯ ಹಾಗೂ ಬಂಡವಾಳ ರಚನೆಗೆ ಸಂಬಂಧಿಸಿದ ಕೆಳಕಂಡ ಆರ್ಥಿಕ ದತ್ತಾಂಶವನ್ನು ಪರಿಶೀಲಿಸಿ :

| ಉಳಿತಾಯ ಮತ್ತು ಬಂಡವಾಳ ರಚನೆ | 1991 – 92 | 1995 – 96 | 1999 – 00 | 2003 – 04 |
|---|---|---|---|---|
| 1. ಸ್ಥೂಲ ಗೃಹ ಉಳಿತಾಯ | | | | |
| ಗೃಹೋಪಯೋಗಿ ವಲಯ | 110736 | 216140 | 404401 | 671692 |
| ಖಾಸಗಿ ಕಾರ್ಪೋರೇಟ್ ವಲಯ | 20304 | 58542 | 84329 | 114157 |
| ಸಾರ್ವಜನಿಕ ವಲಯ | 12868 | 24065 | — 20049 | — 9429 |
| 2. ಸ್ಥೂಲ ಗೃಹ ಬಂಡವಾಳ ರಚನೆ | | | | |
| ಸಾರ್ವಜನಿಕ ವಲಯ | 57633 | 90977 | 134484 | 154086 |
| ಖಾಸಗಿ ವಲಯ | 85627 | 224202 | 323778 | 481608 |
| 3. ಒಟ್ಟು ಜಿ.ಡಿ.ಪಿ. (ಕೋಟಿ ರೂ.ಗಳಲ್ಲಿ) | 653117 | 1188012 | 1936831 | 2760025 |

ಮೇಲಿನ ದತ್ತಾಂಶವನ್ನು ಬಳಸಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

(a) ಸ್ಥೂಲ ಗೃಹ ಉಳಿತಾಯಗಳ ಮೂಲಗಳಿಂದ ಅದರ ಬೆಳವಣಿಗೆಯನ್ನು ವಿಶ್ಲೇಷಿಸಿ.

(b) ಸಾರ್ವಜನಿಕ ಮತ್ತು ಖಾಸಗಿ ವಲಯಗಳಿಂದ ಸ್ಥೂಲ ಬಂಡವಾಳ ರಚನೆಯ ಬೆಳವಣಿಗೆಯನ್ನು ವಿಶ್ಲೇಷಿಸಿ.

(c) ಉಳಿತಾಯ ಅನುಪಾತ ಮತ್ತು ಹೂಡಿಕೆ ಅನುಪಾತದ ಮಟ್ಟಗಳು ಹಾಗೂ ಬೆಳವಣಿಗೆಯನ್ನು ವಿಶ್ಲೇಷಿಸಿ.

(d) ರಾಷ್ಟ್ರೀಯ ಆದಾಯ, ಉಳಿತಾಯ ಮತ್ತು ಬಂಡವಾಳ ರಚನೆಯ ಬೆಳವಣಿಗೆ, - ಇವುಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸಿ.